# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ, ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 04/07/2008 ರ ನಡವಳಿಗಳು

**ವಿಷಯದ ಸಂಖ್ಯೆ:278/2008–09**

ವಾರ್ಡ್ 48, ಹೆಚ್. ಸಿದ್ದಯ್ಯ ರಸ್ತೆಯಲ್ಲಿರುವ ನಗರ ಪಾಲಿಕೆಗೆ ಸೇರಿದ 16X43 ಅಡಿಗಳ ನಿವೇಶವನ್ನು ಅರ್ಜಿದಾರರಾದ ಶ್ರೀ.ಸೈಯದ್ ನವೀದ್ ಅಹಮದ್ ಎಂಬುವವರಿಗೆ ಕ್ರಯಕ್ಕೆ ನೀಡುವ ಬಗ್ಗೆ.

**ಪ್ರಸ್ತಾವನೆ:**

ವಾರ್ಡ್48, ಸ್ವತ್ತಿನ ಸಂಖ್ಯೆ:48ಬಿ, ಹೆಚ್.ಸಿದ್ದಯ್ಯ ರಸ್ತೆಯಲ್ಲಿರುವ ನಗರ ಪಾಲಿಕೆಗೆ ಸೇರಿದ 16X43 ಅಡಿಗಳ ನಿವೇಶನವಿದ್ದು, ಈ ನಿವೇಶನವನ್ನು ಅರ್ಜಿದಾರರಾದ ಶ್ರೀ.ಸೈಯದ್ ನವೀದ್ ಅಹಮದ್ ಎಂಬುವವರ ಸ್ವತ್ತಿಗೆ ಹೊಂದಿಕೊಂಡಂತಿರುವ ಮಾರ್ಜಿನಲ್ ಲ್ಯಾಂಡ್ ಆಗಿರುತ್ತದೆ. ಈ ಜಾಗವನ್ನು ಅರ್ಜಿದಾರರು ಗುತ್ತಿಗೆ ಅಥವಾ ಕ್ರಯಕ್ಕೆ ನೀಡಲು ಕೋರಿ, ದಿನಾಂಕ:24/07/2003 ರಂದು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದರಿ ಸ್ಥಳವು ಬೇರೆ ಉದ್ದೇಶಕ್ಕೆ ಅಂದರೆ ನಿರ್ಮಲ ಶೌಚಾಲಯ, ಗ್ರಂಥಾಲಯ, ಅಂಗನವಾಡಿ ಹಾಗೂ ಇತರೇ ಕಟ್ಟಡಗಳನ್ನು ನಿರ್ಮಿಸಲು ಬಳಸಬಹುದೇ ಎಂಬ ಬಗ್ಗೆ ಮಾಹಿತಿಯನ್ನು ಪಡೆಯುವ ಸಲುವಾಗಿ ಆರೋಗ್ಯ ವೈದ್ಯಾಧಿಕಾರಿ, (ಚಾಮರಾಜಪೇಟೆ ವಲಯ) ರವರಿಂದ ವರದಿಯನ್ನು ಕೋರಲಾಗಿದ್ದು, ಸದರಿಯವರ ವರದಿಯಲ್ಲಿ ಈ ಸ್ಥಳಕ್ಕೆ ಹತ್ತಿರದಲ್ಲಿಯೇ ಜೆ.ಸಿ.ರಸ್ತೆ ಹಾಗೂ ಸಿದ್ದಯ್ಯ ರಸ್ತೆ ಕೂಡುವ ಸ್ಥಳದಲ್ಲಿ (ಹಳೇ ಭಾರತ್ ಟಾಕೀಸ್ ಎದುರಿಗೆ) ಇರುವ ಪಾಲಿಕೆಯ ಸಂಕೀರ್ಣದ ಪಕ್ಕದಲ್ಲಿ ಈಗಾಗಲೇ ಕರ್ನಾಟಕ ಲ್ಯಾಂಡ್ ಆರ್ಮಿವತಿಯಿಂದ ನಿರ್ಮಲ ಬೆಂಗಳೂರು ಮಾದರಿಯಲ್ಲಿ ಶೌಚಾಲಯ ನಿರ್ಮಿಸಲು ಕೆಲಸ ಪ್ರಾರಂಭಿಸಲಾಗಿರುತ್ತದೆಂದು ತಿಳಿಸಿರುತ್ತಾರೆ. ಉಪ ಆಯುಕ್ತರು (ಪಶ್ಚಿಮ) ರವರ ವರದಿಯಲ್ಲಿ ಈ ಪ್ರದೇಶದಲ್ಲಿ ಹೊಲಿಗೆ ತರಬೇತಿ ಕೇಂದ್ರ ಅಥವಾ ಶೌಚಾಲಯ ನಿರ್ಮಿಸಲು ಸೂಕ್ತ ಸ್ಥಳವಾಗಿಲ್ಲದ ಕಾರಣ ಸದರಿ ಸ್ಥಳವು ವಾಣಿಜ್ಯ ಸ್ಥಳವಾಗಿರುತ್ತದೆಂದು ತಿಳಿಸಿರುತ್ತಾರೆ.

ಸದರಿ ನಿವೇಶನವನ್ನು ಬೇರೆಯವರು ಅನಧಿಕೃತವಾಗಿ ಉಪಯೋಗಿಸಿಕೊಳ್ಳುವ ಸಾಧ್ಯತೆಗಳು ಇರುವ ಕಾರಣ ಅರ್ಜಿದಾರರು ಸದರಿ ಜಾಗವನ್ನು ಅವರಿಗೆ ಕ್ರಯಕ್ಕೆ ನೀಡುವಂತೆ ಕೋರಿರುತ್ತಾರೆ. ಚಾಮರಾಜಪೇಟೆ ಶಾಸಕರು ಆಯುಕ್ತರವರಿಗೆ ಸಲ್ಲಿಸಿರುವ ಮನವಿಯಲ್ಲಿ ಅರ್ಜಿದಾರರು ಕೋರಿರುವ ಸ್ವತ್ತು ಪಾಲಿಕೆಗೆ ಸೇರಿದಾಗಿದ್ದು, ಪಾಲಿಕೆಯ ಆದಾಯದ ದೃಷ್ಟಿಯಿಂದ ಅರ್ಜಿದಾರರಿಗೆ ಗುತ್ತಿಗೆ ಅಥವಾ ಕ್ರಯಕ್ಕೆ ನೀಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಸ್ಥಳದ ಪ್ರಸ್ತುತ ಮಾರುಕಟ್ಟೆ ದರವು ವಾಣಿಜ್ಯಕ್ಕೆ ಚದರಡಿ 1ಕ್ಕೆ ರೂ.3500=00 ಗಳಿರುತ್ತದೆ. ಮತ್ತು ಈ ಜಾಗವು ವಾಣಿಜ್ಯ ಉಪಯೋಗಕ್ಕೆ ಯೋಗ್ಯವಾಗಿರುತ್ತದೆ. ಸದರಿ ಸ್ಥಳದ ವಿಸ್ತೀರ್ಣ 16X43=688 ಚದರ ಅಡಿಗಳಾಗಿದ್ದು, ವಾಣಿಜ್ಯ ದರದಂತೆ ಲೆಕ್ಕಾಚಾರ ನೀಡಿದ್ದಲ್ಲಿ 688X3500=ರೂ.24,08,000–00 ಗಳಾಗುತ್ತದೆ. ಸರ್ಕಾರದ ಮಾರ್ಗಸೂಚಿಯಂತೆ ಶೇ.20ರಷ್ಟು ಹೆಚ್ಚುವರಿ ಮಾಡಿ ಸೇರಿಸಿದಾಗ ಈ ಸ್ವತ್ತಿನ ಒಟ್ಟು ಮೌಲ್ಯ ರೂ.28,89,600–00 (ಇಪ್ಪತ್ತೆಂಟು ಲಕ್ಷದ ಎಂಬತ್ತೊಂಬತ್ತು ಸಾವಿರದ ಆರುನೂರು ರೂಪಾಯಿಗಳು ಮಾತ್ರ) ಗಳಾಗುತ್ತದೆ.

ಈ ಜಾಗವನ್ನು ಸದರಿ ಅರ್ಜಿದಾರರಿಗೆ ಗುತ್ತಿಗೆ, ಕ್ರಯಕ್ಕೆ ನೀಡುವ ಸಂಬಂಧ ಸ್ಥಾಯಿ ಸಮಿತಿಗಳು ಹಾಗೂ ನಗರಪಾಲಿಕೆ ಸಭೆ ಮುಂದೆ ಸೂಕ್ತ ತೀರ್ಮಾನಕ್ಕಾಗಿ ದಿನಾಂಕ:28/06/2006 ರಂದು ಟಿಪ್ಪಣಿಯನ್ನು ಮಂಡಿಸಲಾಗಿದ್ದು, ದಿನಾಂಕ:31/07/2006 ರಂದು ನಡೆದ ನಗರ ಯೋಜನೆ ಮತ್ತು ಅಭಿವೃದ್ಧಿ ಸ್ಥಾಯಿ ಸಮಿತಿ ಸಭೆಯ ನಿರ್ಣಯದಲ್ಲಿ "ದಿನಾಂಕ:28/06/2006 ರ ಆಯುಕ್ತರವರ ಟಿಪ್ಪಣಿಯನ್ನು ಒಪ್ಪುತ್ತಾ, ಅರ್ಜಿದಾರರಿಗೆ 16X43=688 ಚದರಅಡಿ ಜಾಗವನ್ನು

. . . 2

## ಸಾರ್ವಜನಿಕ ಆರೋಗ್ಯ ಸ್ಥಾಯಿ ಸಮಿತಿ ತೆರಿಗೆ ಮತ್ತು ಆರ್ಥಿಕ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ: 04/07/2008 ರ ನಡವಳಿಗಳು

**ವಿಷಯ ಸಂಖ್ಯೆ:285/2008–09**

ಬೆಂಗಳೂರಿನ ಸುಬ್ಬರಾಯನಪಾಳ್ಯ ಗ್ರಾಮದ ರಾಜರಾಜೇಶ್ವರಿನಗರದ ಸರ್ವೆ ನಂ.143 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಮೂಲಕ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಯೋಜನೆಯ ಬಗ್ಗೆ.

**ಪ್ರಸ್ತಾವನೆ:**

ಹೊಸದಾಗಿ ಸೇರ್ಪಡೆಯಾಗಿರುವ ವಲಯಗಳೊಂದಿಗೆ ಬೆಂಗಳೂರಿನ ಜನಸಂಖ್ಯೆಯು ಅಂದಾಜು 7.5 ದಶಲಕ್ಷಗಳಾಗಿರುತ್ತದೆ. ಕಳೆದ ದಶಕದಲ್ಲಿ ನಗರವು ಕಂಡಿರುವ ಆರ್ಥಿಕ ಬೆಳವಣಿಗೆಯಿಂದಾಗಿ ಅಗಣಿತ ಉದ್ಯೋಗಾವಕಾಶಗಳು ಸೃಷ್ಟಿಯಾಗಿದೆ. ದೇಶದ ನಾನಾ ಭಾಗಗಳಿಂದ ವೃತ್ತಿನಿರತರು ನಗರಕ್ಕೆ ಆಗಮಿಸಿರುತ್ತಾರೆ. ಜನಸಂಖ್ಯಾ ಸ್ಫೋಟ ಮತ್ತು ಸಾರ್ವಜನಿಕರ ಮೇಲ್ಮಟ್ಟದ ಆರ್ಥಿಕ ಮಟ್ಟವು ಜನರ ಜೀವನ ಶೈಲಿಯಲಿ ಅಪಾರ ಬದಲಾವಣೆಯನ್ನು ತಂದಿದೆ. ಇದರ ಪರಿಣಾಮವಾಗಿ, ಘನತ್ಯಾಜ್ಯ ವಸ್ತುಗಳ ಪ್ರಮಾಣವೂ ಬಹಳಷ್ಟು ಹೆಚ್ಚಿದೆ. ಎಂ.ಎಸ್.ಡಬ್ಲ್ಯೂ ನಿಯಮಾವಳಿ 2000 (ಮೇಂಟನೆನ್ಸ್ ಮತ್ತು ಹ್ಯಾಂಡಲಿಂಗ್) ಪ್ರಕಾರ ಘನತ್ಯಾಜ್ಯ ವಸ್ತುಗಳ ಸುರಕ್ಷಿತ ಮತ್ತು ವೈಜ್ಞಾನಿಕ ವಿಲೇವಾರಿಯು ಸ್ಥಳೀಯ ನಗರ ಸಭೆಗಳ ಜವಾಬ್ದಾರಿಯಾಗಿರುತ್ತದೆ.

ಪಾಲಿಕೆಯು ಖಾಸಗಿ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡು ಮಾವಳ್ಳಿಪುರ (ಪ್ರತಿದಿನ 600 ಮೆ.ಟ) ಮತ್ತು ಮಂಡೂರು (ಪ್ರತಿದಿನ 1000 ಮೆ.ಟ) ಘನತ್ಯಾಜ್ಯಗಳ ವಿಲೇವಾರಿ ಘಟಕಗಳನ್ನು ಸ್ಥಾಪಿಸಿದೆ. ಕೆ.ಸಿ.ಡಿ.ಸಿ ಸಂಸ್ಥೆಯು ಪ್ರತಿದಿನ 300 ಮೆ.ಟ ಘನತ್ಯಾಜ್ಯವನ್ನು ಸಂಸ್ಕರಿಸುತ್ತಿದ್ದು, ತನ್ನ ಸಾಮರ್ಥ್ಯವನ್ನು ದ್ವಿಗುಣಗೊಳಿಸುವ ನಿಟ್ಟಿನಲ್ಲಿದೆ. ಪಾಲಿಕೆಯು ಮೆ.ಟೆರ್ರಾಫಾರ್ಮ ಸಂಸ್ಥೆಯೊಡನೆ ದೊಡ್ಡಬಳ್ಳಾಪುರದ ಹತ್ತಿರ ಪ್ರತಿ ದಿನ 1000 ದಿಂದ 1500 ಮೆ.ಟ. ಘನತ್ಯಾಜ್ಯವನ್ನು ಸಂಸ್ಕರಿಸುವ ಘಟಕಕ್ಕೆ ಒಪ್ಪಂದ ಮಾಡಿಕೊಂಡಿದ್ದು, ಪ್ರಾರಂಭಿಸುವ ಹಂತದಲ್ಲಿದೆ ಮತ್ತು ಹೊಸದಾಗಿ ದೊಡ್ಡಬಿದರಕಲ್ಲು (ಪ್ರತಿ ದಿನ 1000 ಮೆ.ಟ) ಹಾಗೂ ಮಂಡೂರು–ಗುಂಡೂರು ರಸ್ತೆಯ ಉತ್ತರ ಭಾಗದಲ್ಲಿರುವ ಪಾಲಿಕೆಯ ನಿವೇಶನದಲ್ಲಿ (ಪ್ರತಿ ದಿನ 1000 ಮೆ.ಟ) ಘನತ್ಯಾಜ್ಯಗಳ ವಿಲೇವಾರಿ ಘಟಕಗಳನ್ನು ಸ್ಥಾಪಿಸಲು ಈಗಾಗಲೇ ಟೆಂಡರ್ ಪ್ರಕಟಿಸಲಾಗಿದೆ.

ಹೊಸ ವಲಯಗಳ ಸೇರ್ಪಡೆಯಿಂದಾಗಿ ಈ ಹಿಂದಿನ ಬೆಂಗಳೂರು ನಗರಕ್ಕಾಗಿ ಪಾಲಿಕೆಯು ಮಾಡಿದ್ದ ವ್ಯವಸ್ಥೆಯ ತೀವ್ರ ಕೊರತೆ ಕಂಡು ಬಂದಿರುತ್ತದೆ ಮತ್ತು ಘನತ್ಯಾಜ್ಯ ನಿರ್ವಹಣಾ ಘಟಕಗಳ ಅವಶ್ಯಕತೆ ತೀವ್ರವಾಗಿರುತ್ತದೆ. ಹಾಲಿ ಇರುವ ಪರಿಸ್ಥಿತಿ ಮತ್ತು ಮುಂಬರುವ ವರ್ಷಗಳಲ್ಲಿ ಉತ್ಪತ್ತಿಯಾಗುವ ಘನತ್ಯಾಜ್ಯಗಳನ್ನು ಪರಿಗಣಿಸಿ ಹೆಚ್ಚುವರಿಯಾಗಿ ಪ್ರತಿ ದಿನ ಸುಮಾರು 2000 ದಿಂದ 3000 ಮೆ.ಟ ಘನತ್ಯಾಜ್ಯಗಳ ನಿರ್ವಹಣೆಯ ಅವಶ್ಯಕತೆಯಿರುತ್ತದೆ. ಜನಸಂಖ್ಯಾ ಸ್ಫೋಟ ಮತ್ತು ಸಾರ್ವಜನಿಕರ ಮೇಲ್ಮಟ್ಟದ ಆರ್ಥಿಕ ಮಟ್ಟವು ಘನತ್ಯಾಜ್ಯ ವಸ್ತುಗಳ ಪ್ರಮಾಣ ಮತ್ತು ಗುಣಗಳಲ್ಲಿ ನಿರಂತರ ಬದಲಾವಣೆಯಾಗುತ್ತಿದ್ದು, ಮುಂಬರುವ ವರ್ಷಗಳಲ್ಲಿ ಅಂದಾಜಿಸುವುದು ಕಷ್ಟಕರವಾಗಿದೆ.

ಘನತ್ಯಾಜ್ಯ ವಸ್ತುಗಳನ್ನು ಬೇರ್ಪಡಿಸಿ, ಗೊಬ್ಬರವನ್ನು ತಯಾರಿಸಿ, ಉಳಿಕೆ ನಿರುಪಯುಕ್ತ ವಸ್ತುಗಳನ್ನು ಇಂಜಿನೀಯರ್ಡ್ ಲ್ಯಾಂಡ್‌ಫಿಲ್‌ನಲ್ಲಿ ವಿಲೇವಾರಿ ಮಾಡುವುದು ಈವರೆಗಿನ ತಂತ್ರಜ್ಞಾನವಾಗಿರುತ್ತದೆ. ಸಾಂಪ್ರದಾಯಿಕ ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಯೋಜನೆಗಳಿಗೆ ಭಾರಿ ವಿಸ್ತೀರ್ಣದ ಜಮೀನು ಅವಶ್ಯಕವಿದ್ದು, ಜಮೀನಿನ ಮರುಪ್ರಯೋಗವು ಸೀಮಿತವಾಗಿರುತ್ತದೆ. ಆದರೆ, ಘನತ್ಯಾಜ್ಯ ವಸ್ತುಗಳ ಸಂಸ್ಕರಣಾ ತಂತ್ರಜ್ಞಾನದಲ್ಲಿ ಆಗಿರುವ ಮುನ್ನಡೆಯಿಂದಾಗಿ ಪ್ಲಾಸ್ಟಿಕ್, ರಬ್ಬರ್, ಅನಿಲ ಮುಂತಾದ ಮರುಪಯೋಗಿ ಉತ್ಪಾದನೆಗಳು ಮತ್ತು ವಿದ್ಯುತ್‌ಶಕ್ತಿ

. . . . 2

ಉತ್ಪಾದನೆ ಮುಂತಾದ ಯೋಜನೆಗಳನ್ನು ಅಳವಡಿಸಲು ಸಾಧ್ಯವಾಗಿದೆ. ಜಮೀನಿನ ಬೆಲೆಗಳು ಗಗನಕ್ಕೇರಿರುವ ಪ್ರಸ್ತುತ ಪರಿಸ್ಥಿತಿಯಲ್ಲಿ ಕನಿಷ್ಟ ಭೂಮಿ ಮತ್ತು ಅವಧಿಯಲ್ಲಿ ಘನತ್ಯಾಜ್ಯ ವಸ್ತುಗಳನ್ನು ಸಂಸ್ಕರಿಸುವ ತಂತ್ರಜ್ಞಾನವು ಇಂದಿನ ಅವಶ್ಯಕತೆಯಾಗಿರುತ್ತದೆ. ಕೇಂದ್ರದ ಎಂಎನ್‌ಇಎಸ್ ಶಿಫಾರಸ್ಸು ಮಾಡಿರುವ ಬಯೋಗ್ಯಾಸ್ ಮತ್ತು ವಿದ್ಯುತ್‌ಶ್ಚಕ್ತಿ ತಯಾರಿಕ ತಂತ್ರಜ್ಞಾನಕ್ಕೆ ಸರ್ವೋಚ್ಛ ನ್ಯಾಯಾಲಯವು ಅನುಮತಿ ನೀಡಿದೆ.

ಇತ್ತೀಚಿನ ದಿನಗಳಲ್ಲಿ ಹಲವಾರು ಸಂಸ್ಥೆಗಳು ತಮ್ಮ ಆಧುನಿಕ ತಂತ್ರಜ್ಞಾನವನ್ನು ಪಾಲಿಕೆಯ ಅಧಿಕಾರಿಗಳ ಮುಂದೆ ನಿವೇದಿಸಿದ್ದು, ಘನತ್ಯಾಜ್ಯಗಳ ಬೇರ್ಪಡಿಸುವಿಕೆ ಮತ್ತು ಪ್ಲಾಸ್ಟಿಕ್, ರಬ್ಬರ್, ಅನಿಲ ಮುಂತಾದ ಮರುಪಯೋಗಿ ಉತ್ಪಾದನೆಗಳು ಮತ್ತು ವಿದ್ಯುತ್‌ಶ್ಚಕ್ತಿ ಉತ್ಪಾದನೆ ಮುಂತಾದ ಸಂಸ್ಕರಣೆಗಳು ಸಂಪೂರ್ಣವಾಗಿ ಮುಚ್ಚಲ್ಪಟ್ಟ ವ್ಯವಸ್ಥೆಯಲ್ಲಿ ನಡೆಯುವುದೆಂದು ವಿಧಿತವಾಯಿತು. ಈ ವಿಧಾನದಿಂದ ಸ್ವಚ್ಛ ಹಾಗೂ ಆರೋಗ್ಯಕರ ಪರಿಸರ ಉಂಟಾಗಿ, ಘಟಕ ಮತ್ತು ಅದರ ನೆರೆಹೊರೆಯಲ್ಲಿ ದುರ್ನಾತ ಮುಂತಾದ ದೂರುಗಳಿಗೆ ಅವಕಾಶ ಇಲ್ಲದಂತಾಗುತ್ತದೆ ಹಾಗೂ ಈ ತಂತ್ರಜ್ಞಾನದ ಯೋಜನೆಗಳಿಗೆ ಘನತ್ಯಾಜ್ಯ ವಸ್ತುಗಳ ಪ್ರಮಾಣದ ಅನುಸಾರ ಸುಮಾರು 10 ಎಕರೆ ಜಮೀನು ಸಾಕಾಗುವುದೆಂದು ತಿಳಿದುಬಂದಿರುತ್ತದೆ.

ಮೇಲೆ ತಿಳಿಸಿದ ವಿಷಯಗಳ ಹಿನ್ನೆಲೆಯಲ್ಲಿ ಆಧುನಿಕ ತಂತ್ರಜ್ಞಾನವುಳ್ಳ ಅರ್ಹ ಘನತ್ಯಾಜ್ಯ ಆಪರೇಟರ್‌ಗಳಿಂದ ಟೆಂಡರ್ ಕರೆಯಲು ಈ ಮೂಲಕ ಪ್ರಸ್ತಾಪಿಸಲಾಗಿದೆ. ಈ ಯೋಜನೆಗಾಗಿ ಪಾಲಿಕೆಯು ಯಶಸ್ವಿ ಬಿಡ್ಡುದಾರರಿಗೆ ಸುಮಾರು 10 ಎಕರೆ ಜಮೀನನ್ನು ಗುತ್ತಿಗೆ ಆಧಾರದ ಮೇಲೆ 20 ವರ್ಷಗಳಿಗೆ ಮತ್ತು ಯೋಜನೋತ್ತರ 15 ವರ್ಷಗಳಿಗೆ ಆಪರೇಟರ್‌ನ ಖರ್ಚು ಮತ್ತು ವೆಚ್ಚದಲ್ಲಿ ನೀಡುವುದು. ಆಪರೇಟರ್‌ರಿಂದ ಪಾಲಿಕೆಗೆ ಎಕರೆ ಒಂದಕ್ಕೆ ವಾರ್ಷಿಕ ರೂ.100/- ರಂತೆ ಹತ್ತು ಎಕರೆ ಜಮೀನಿನ ಗುತ್ತಿಗೆ ಹಣವಾಗಿ ಪಡೆಯಲಾಗುವುದು. ಈ ಟೆಂಡರಿನಲ್ಲಿ ಪಾಲಿಕೆಯು ಗುತ್ತಿಗೆದಾರರಿಗೆ ನೀಡಬೇಕಾದ ಟಿಪ್ಪಿಂಗ್ ಫೀ ಅನ್ನು ನಮೂದಿಸಬೇಕಾಗಿರುತ್ತದೆ.

2008–09ನೇ ಸಾಲಿನ ಪಾಲಿಕೆಯ ಆಯವ್ಯಯದಲ್ಲಿ 'ಕೊಳಚೆ ಗುಂಡಿಗಳ ಅಭಿವೃದ್ಧಿ' ಲೆಕ್ಕ ಶೀರ್ಷಿಕೆಯಡಿಯಲ್ಲಿ ಸದರಿ ಯೋಜನೆಗಾಗಿ ರೂ.200.00 ಲಕ್ಷಗಳನ್ನು ಅನುವು ಮಾಡಲಾಗಿದೆ.

ಈ ಹಿನ್ನಲೆಯಲ್ಲಿ ಕೆಳಕಂಡಂತೆ ಅನುಮೋದನೆ ಕೋರಲಾಗಿದೆ.

1. ಬೆಂಗಳೂರಿನ ಸುಬ್ಬರಾಯನಪಾಳ್ಯ ಗ್ರಾಮದ ರಾಜರಾಜೇಶ್ವರಿನಗರದ ಸರ್ವೆ ನಂ.143 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಮೂಲಕ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಯೋಜನೆಗೆ ಆಡಳಿತಾತ್ಮಕ ಅನುಮೋದನೆ.
2. ಬೆಂಗಳೂರಿನ ಸುಬ್ಬರಾಯನಪಾಳ್ಯ ಗ್ರಾಮದ ರಾಜರಾಜೇಶ್ವರಿನಗರದ ಸರ್ವೆ ನಂ.143 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್ ಮೂಲಕ ಘನತ್ಯಾಜ್ಯ ವಸ್ತುಗಳನ್ನು ವಿಲೇವಾರಿ ಮಾಡುವ ಯೋಜನೆಗೆ ಸರ್ಕಾರದ ಅನುಮೋದನೆಯನ್ನು ನಿರೀಕ್ಷಿಸಿ ಟೆಂಡರ್ ಕರೆಯಲು ಅನುಮೋದನೆ.
3. ಬೆಂಗಳೂರಿನ ಸುಬ್ಬರಾಯನಪಾಳ್ಯ ಗ್ರಾಮದ ರಾಜರಾಜೇಶ್ವರಿನಗರದ ಸರ್ವೆ ನಂ.143 ರಲ್ಲಿ ಘನತ್ಯಾಜ್ಯ ವಸ್ತುಗಳ ಸಂಸ್ಕರಣೆ ಮತ್ತು ಇಂಜಿನೀಯರ್ಡ್ ಲ್ಯಾಂಡ್‌ಫಿಲ್‌ಗಾಗಿ 10 ಎಕರೆ ಜಮೀನನ್ನು ಸದರಿ ಯೋಜನೆಗಾಗಿ ಸರ್ಕಾರದ ಅನುಮೋದನೆಗೆ ಒಳಪಟ್ಟು 20 ವರ್ಷಗಳು ಮತ್ತು ಯೋಜನ್ನೋತ್ತರ 15 ವರ್ಷಗಳ ಅವಧಿಗೆ ಎಕರೆ ಒಂದಕ್ಕೆ ರೂ.100.00 ರಂತೆ ಗುತ್ತಿಗೆ ನೀಡಲು ಅನುಮೋದನೆ

ಮೇಲ್ಕಂಡ ಅಂಶಗಳಿಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:18/06/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರ ದಿನಾಂಕ:18/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:04/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:292/2008-09**

ಭಾರತಿನಗರ ವಿಭಾಗದ ಕಾಮಗಾರಿಯನ್ನು ಇಲಾಖಾವತಿಯಿಂದ ನಿರ್ವಹಿಸಿರುವ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

| ಕ್ರಸಂ | ವಾರ್ಡ್ ಸಂಖ್ಯೆ | ಕಾಮಗಾರಿ ಹೆಸರು | ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ |
|---|---|---|---|
| 1 | 81 | Maintenance and deweeding at Ulsoor lake by manual means for the period of September, October, November and December 2006 (081-09-M-G-O-O-DE-002) | 2.00 |
| 2 | 81 | Refixing of Screen Barriers along the SWD from Munireddy Palya to Ulsoor Lake (081-09-M-G-O-O-DE-003) | 0.75 |
| 3 | 81 | Maintenance and deweeding at Ulsoor lake by manual means for the period of January,February and March 2007 (081-09-M-G-O-O-DE-004) | 1.50 |

ಕಾರ್ಯಪಾಲಕ ಅಭಿಯಂತರರು, ಭಾರತಿನಗರ ರವರು ಮೇಲ್ಕಂಡ ಕಾಮಗಾರಿಗಳಿಗೆ ಅಂದಾಜು ಪಟ್ಟಿಗಳನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಗಳ ವೆಚ್ಚವನ್ನು "Maintenance 17 Lakes" ಅನುದಾನದಡಿಯಲ್ಲಿ ಭರಿಸಲು ಪ್ರಸ್ತಾವನೆ ಸಲ್ಲಿಸಿದ್ದು, ಕಾಮಗಾರಿ ಸಂಕೇತವನ್ನು ಸಕ್ಷಮ ಪ್ರಾಧಿಕಾರರಿಂದ ಪಡೆಯಲಾಗಿರುತ್ತದೆ.

ಸದರಿ ಕಾಮಗಾರಿಗಳನ್ನು ಅತೀ ಜರೂರಾಗಿ ತೆಗೆದುಕೊಳ್ಳಬೇಕಾದುದ್ದರಿಂದ ತುಂಡು ಗುತ್ತಿಗೆ ಆಧಾರದ ಮೇಲೆ ಶ್ರೀ.ರವೀಂದ್ರ ಕುಮಾರ್, ಗುತ್ತಿಗೆದಾರರಿಗೆ ವಹಿಸಿ ಕಾಮಗಾರಿ ನಿರ್ವಹಿಸಿರುವ ಕ್ರಮಕ್ಕೆ ಸ್ಥಿರೀಕರಣ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:21/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:21/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:08/07/2008ರ ನಡವಳಿಗಳು</u>

<u>ವಿಷಯ ಸಂಖ್ಯೆ:203/2008–09</u>

Improvements and Asphalting to Kacharakanahalli main road in Thanisandra sub-division in Byatarayanapura Division ರ ಕಾಮಗಾರಿ ಬಗ್ಗೆ.

<u>ಪ್ರಸ್ತಾವನೆ:</u>

Improvements and Asphalting to Kacharakanahalli main road in Thanisandra sub-division in Byatarayanapura Division ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರು ದಿನಾಂಕ:14–11–2007 ರಂದು ಎರಡು ಲಕೋಟೆ ಪದ್ಧತಿಯಲ್ಲಿ (ಅಲ್ಪಾವಧಿ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ಗಳು ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯನಪುರ) ರವರು ಆರ್ಥಿಕ ಬಿಡ್‌ನಂತೆ ಕನಿಷ್ಠ ಟೆಂಡರ್‌ದಾರರಾದ ಶ್ರೀ.ಎಮ್.ವೆಂಕಟರಾಮ ರೆಡ್ಡಿ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.69.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007–08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ನಿರೀಕ್ಷಿಸಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊಬಲಗು ರೂ.68,78,668.82 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಎಮ್.ವೆಂಕಟರಾಮ ರೆಡ್ಡಿ, ರವರು ಶೇಕಡ 44.66% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 36.62% ರಷ್ಟು ಹೆಚ್ಚುವರಿ ದರಗಳನ್ನು Negotiated Schedule-B ನಲ್ಲಿ ನಮೂದಿಸಿರುತ್ತಾರೆ. ಸದರಿ ದರಗಳನ್ನು ಸಂಧಾನದ ನಂತರ ತುಲನೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿ (2007–08) ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚಿಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ದರದ ವ್ಯತ್ಯಾಸವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.50% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆ ಎಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಬ್ಯಾಟರಾಯನಪುರ) ರವರು ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.93,98,272.21 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯು.ಡಿ.ಡಿ/116/ಎಹೆಚ್‌ಡಿ/2002 ದಿನಾಂಕ:24–01–2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು, 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರ ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಎಮ್.ವೆಂಕಟರಾಮ ರೆಡ್ಡಿ, ರವರು 2007–08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ಶೇಕಡ.14.50 ರಷ್ಟು ಹೆಚ್ಚುವರಿ ದರಗಳು ಅಥವಾ ರೂ.93,98,272.21 (ರೂ.ತೊಂಬತ್ತ್ಮೂರು ಲಕ್ಷದ ತೊಂಬತ್ತೆಂಟು ಸಾವಿರದ ಇನ್ನೂರ ಎಪ್ಪತ್ತೆರಡು ಮತ್ತು ಪೈಸೆ ಇಪ್ಪತ್ತೊಂದು ಮಾತ್ರ) ಗಳ ಟೆಂಡರ್ ಅನುಮೋದನೆ, ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.69.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ ಮತ್ತು ಕಾರ್ಯಪಾಲಕ ಅಭಿಯಂತರವರು ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ2:0/05/2008 ರ ಟಿಪ್ಪಣಿ.

**<u>ತೀರ್ಮಾನ:</u>** ಆಯುಕ್ತರವರ ದಿನಾಂಕ:20/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

**ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:08/07/2008 ರ ನಡವಳಿಗಳು**

**ವಿಷಯದ ಸಂಖ್ಯೆ:205/2008–09**

Improvements and Asphalting to 80 feet Road from Nagawara Main Road to Kacharakanahalli Main Road in Thanisandra Sub-division in Byatarayanapura ರ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

Improvements and Asphalting to 80feet Road from Nagawara Main Road to Kacharakanahalli Main Road in Thanisandra Sub-division in Byatarayanapura ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯಪುರ) ರವರು ದಿನಾಂಕ:14/11/2007 ರಂದು ಎರಡು ಲಕೋಟೆ ಪದ್ದತಿಯಲ್ಲಿ (ಅಲ್ಪಾವಧಿಯ ಟೆಂಡರ್ ಪ್ರಕಟಣೆ) ಟೆಂಡರ್ ಆಹ್ವಾನಿಸಿರುತ್ತಾರೆ ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ಗಳು ತಾಂತ್ರಿಕ ಬಿಡ್ಡ್‌ನಲ್ಲಿ ಸಿಂಧುವಾಗಿರುತ್ತವೆ. ಕಾರ್ಯಪಾಲಕ ಅಭಿಯಂತರರು (ಬ್ಯಾಟರಾಯಪುರ) ರವರು ಆರ್ಥಿಕ ಬಿಡ್ಡ್‌ನಲ್ಲಿ ಕನಿಷ್ಠ ಟೆಂಡರ್‌ದಾರರಾದ ಶ್ರೀ.ಸಿ.ಜಿ.ಚಂದ್ರಪ್ಪ, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.96.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007–08ನೇ ಸಾಲಿನ ದರ ಪಟ್ಟಿಯ ಆಧಾರದ ಮೇಲೆ ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಕಾಮಗಾರಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನಿರೀಕ್ಷಿಸಿ ಟೆಂಡರ್ ಕರೆಯಲಾಗಿರುತ್ತದೆ. ಟೆಂಡರ್‌ಗಿಟ್ಟ ಮೊಬಲಗು ರೂ.95,59,382.54 ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಸಿ.ಜಿ.ಚಂದ್ರಪ್ಪ ರವರು ಶೇಕಡ 43.48% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ ಗುತ್ತಿಗೆದಾರರು ಸಂಧಾನದ ನಂತರ ಶೇಕಡ 38.12% ರಷ್ಟು ಹೆಚ್ಚುವರಿ ದರಗಳನ್ನು Negotiated Schedule-B ನಲ್ಲಿ ನಮೂದಿಸಿರುತ್ತಾರೆ. ಸದರಿ ದರಗಳನ್ನು ಸಂಧಾನದ ನಂತರ ತುಲನೆ ಮಾಡಿ ಪ್ರಸಕ್ತ ಸಾಲಿನ ದರಪಟ್ಟಿ (2007–08) ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚಿಗೆ ಹೊರಡಿಸಿದ ಸುತ್ತೋಲೆಯಂತೆ ಬಿಟುಮಿನ್ ದರದ ವ್ಯತ್ಯಾಸವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.50% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ಧನಿರುತ್ತೇನೆ ಎಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಬ್ಯಾಟರಾಯಪುರ) ರವರು ಶಿಫಾರಸ್ಸು ಮಾಡಿದ್ದು ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶ ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.1,32,03,585.79 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ ಯು.ಡಿ.ಡಿ/116/ಎಹೆಚ್‌ಡಿ/ 2002 ದಿನಾಂಕ: 24–01–2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೋರೇಷನ್ ಕಾಯ್ದೆ ನಿಯಮಗಳು 1977 ನಿಯಮ 6 ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು ಇದರಂತೆ ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಡಳಿತಗಾರರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಸಿ.ಜಿ.ಚಂದ್ರಪ್ಪ ರವರು 2007–08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ಶೇಕಡ 14.50% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.1,32,03,585.79 (ರೂ.ಒಂದು ಕೋಟಿ ಮೂವತ್ತೆರಡು ಲಕ್ಷದ ಮೂರು ಸಾವಿರದ ಐದು ನೂರ ಎಂಭತ್ತೈದು ಮತ್ತು ಪೈಸೆ ಎಪ್ಪತ್ತೊಂಭತ್ತು ಮಾತ್ರ) ಗಳ ಟೆಂಡರ್ ಹಾಗೂ ಸದರಿ ಕಾಮಗಾರಿಯ ಅಂದಾಜು ಮೊತ್ತ ರೂ.96.00 ಲಕ್ಷಗಳಿಗೆ ಅನುಮೋದನೆ ಮತ್ತು ಕಾರ್ಯಪಾಲಕ ಅಭಿಯಂತರರು ಅನುಮೋದನೆ ನಿರೀಕ್ಷಿಸಿ ಟೆಂಡರ್ ಕರೆದಿರುವ ಕ್ರಮವನ್ನು ಸ್ಥಿರೀಕರಿಸಲು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/05/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:20/05/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008ರ ನಡವಳಿಗಳು

**ವಿಷಯದ ಸಂಖ್ಯೆ:294/2008-09**

ತುಮಕೂರು ಸರ್ವೀಸ್ ರಸ್ತೆ ದಕ್ಷಿಣ ಬದಿಯ ಯಶವಂತಪುರ ರೈಲ್ವೆ ಸ್ಟೇಷನ್‌ನಿಂದ ರಾಷ್ಟ್ರೀಯ ಸರಹದ್ದು ಸರಪಳಿ 1830 ಮೀ.ನಿಂದ 1840 ಮೀ ಡಾಂಬರೀಕರಣ ಕಾಮಗಾರಿ ಬಗ್ಗೆ.

**ಪ್ರಸ್ತಾವನೆ:**

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಆರ್ಟಿರಿಯಲ್ಲ ಮತ್ತು ಸಬ್-ಆರ್ಟೀರಿಯಲ್ ರಸ್ತೆಗಳ ಪುನಃಶ್ಚೇತನ ಹಾಗೂ ಡಾಂಬರೀಕರಣಗೊಳಿಸುವ ಸಲುವಾಗಿ ಪೂರ್ವ, ಪಶ್ಚಿಮ ಹಾಗೂ ದಕ್ಷಿಣ ವಲಯಗಳಲ್ಲಿ ಒಟ್ಟು 42 ರಸ್ತೆಗಳನ್ನು ಗುರುತಿಸಿ ರೂ.40.00 ಕೋಟಿ ಮೊತ್ತಕ್ಕೆ ಅಂದಾಜನ್ನು ಸಲ್ಲಿಸಲಾಗಿದ್ದು, ಈ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ.

ಮೇಲಿನ 42 ರಸ್ತೆಗಳಲ್ಲಿ ತುಮಕೂರು ರಸ್ತೆಯ ಉತ್ತರ ಹಾಗೂ ದಕ್ಷಿಣ ಭಾಗದ ಎರಡೂ ಬದಿಯಲಿ ಸರ್ವೀಸ್ ರಸ್ತೆಗಳಿದ್ದು, ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು, ಸದರಿ ರಸ್ತೆಗಳ ಪರಿವೀಕ್ಷಣೆ ಕೈಗೊಂಡ ಸಮಯದಲ್ಲಿ ಹಲವಾರು ಸೂಚನೆಗಳನ್ನು ನೀಡಿರುವ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಅಂದಾಜು ಪಟ್ಟಿಯನ್ನು ತಯಾರಿಸಬೇಕೆಂದು ತಿಳಿಸಿರುತ್ತಾರೆ. ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ಸೂಚಿಸಿರುವ ಅಂಶಗಳು ಈ ಕೆಳಕಂಡಂತಿವೆ;

1. ವಾಹನ ಸಮೀಕ್ಷೆ ವರದಿಯ ಪ್ರಕಾರ 2003 ರಲ್ಲಿ 11 ಕಿ.ಮೀ. ಸರಪಳಿಯಲ್ಲಿ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಭಾರತ ಸರ್ಕಾರದವರು ವಾಹನ ಸಾಂದ್ರತೆಯು 115783 ಪಿ.ಸಿ.ಯು ಗಂಟೆಗೆ/ADT (Average Daily Traffic) ಇರುವುದಾಗಿ ತಿಳಿಸಿರುತ್ತಾರೆ.
2. ವಾಹನ ಸಮೀಕ್ಷೆಯ ವರದಿಯ ಪ್ರಕಾರ 2028ನೇ ಸಾಲಿನ 516 MSA (Million Std. Axle) ಪುನರಾವರ್ತನೆಯ ಪರಿಣಾಮವಾಗಿ ರಸ್ತೆ ಅಗಲೀಕರಣದ ಸ್ಥಳದಲ್ಲಿ ರಸ್ತೆಯ ಪದರಗಳನ್ನು ಅಗತ್ಯಕ್ಕೆ ಅನುಗುಣವಾಗಿ ಸಿದ್ಧಪಡಿಸಬೇಕಾಗಿರುತ್ತದೆ.
3. ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾದಿಕಾರದವರ ವ್ಯಾಪ್ತಿಯು 10ನೇ ಕಿ.ಮೀ. ಸರಪಳಿಯಲ್ಲಿ ಮುಕ್ತಾಯಗೊಳ್ಳುವುದರಿಂದ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ರಸ್ತೆ ಅಗಲೀಕರಣದ ಸರ್ವೀಸ್ ಕಾಮಗಾರಿಯು 10ನೇ ಕಿ.ಮೀ ಸರಪಳಿಯಿಂದ ಪ್ರಾರಂಭವಾಗುವುದರಿಂದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಮುಕ್ತಾಯಗೊಳಿಸುವ ಮಟ್ಟದಿಂದ ಅದೇ ಮಟ್ಟಕ್ಕನುಗುಣವಾಗಿ ಮುಂದುವರೆಸುವಂತೆ ತಿಳಿಸಲಾಗಿದೆ ಹಾಗೂ ಅಗಲೀಕರಣದ ಸ್ಥಳದಲ್ಲಿ ಇರುವ ಮರಗಳನ್ನು ಕಡಿದುರುಳಿಸುವಂತೆ ಸೂಚಿಸಲಾಗಿರುತ್ತದೆ.

ತುಮಕೂರು ಸರ್ವೀಸ್ ರಸ್ತೆಯ ದಕ್ಷಿಣ ಬದಿಯ ಯಶವಂತಪುರ ರೈಲ್ವೆ ಸ್ಟೇಷನ್‌ನಿಂದ ರಾಷ್ಟ್ರೀಯ ಹೆದ್ದಾರಿ ಸರಹದ್ದು ಸರಪಳಿ ಸಂಖ್ಯೆ:0.00 ಮೀ ಯಿಂದ 2200.00 ಮೀ ವರೆಗೆ ಎರಡು ಅಂದಾಜುಪಟ್ಟಿಗಳನ್ನು ರೂ.97.00 ಲಕ್ಷ ಹಾಗೂ 99.00 ಲಕ್ಷ ರೂ.ಗಳಿಗೆ ಈಗಾಗಲೇ ಆಡಳಿತಾತ್ಮಕ ಹಾಗೂ ತಾಂತ್ರಿಕ ಅನುಮೋದನೆ ನೀಡಲಾಗಿರುತ್ತದೆ.

32

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



ಮುಖ್ಯ ಅಭಿಯಂತರರು (ಬೃಹತ್ ರಸ್ತೆಗಳು) ರವರು ದಿನಾಂಕ:12/03/2008 ರಂದು ನಡೆದ ಪರಿವೀಕ್ಷಣಾ ಸಮಯದಲ್ಲಿ 0.00 ಮೀ.ಯಿಂದ 2200.00 ಮೀ.ವರೆಗೆ NHAI ವಿಶಿಷ್ಟತೆಗಳನ್ನು ಅಳವಡಿಸಿಕೊಂಡು ಕಾಮಗಾರಿಯನ್ನು ನಿರ್ವಹಿಸಲು ಸೂಚಿಸಿದ್ದ ಮೇರೆಗೆ 0.00 ಯಿಂದ 630.00 ಮೀ ವರೆಗೆ ಅಂದಾಜು ಪಟ್ಟಿ ಮೊತ್ತ ರೂ.99.00 ಲಕ್ಷಗಳಿಗೆ ಕಾಮಗಾರಿಯನ್ನು ನಿರ್ವಹಿಸಲಾಗಿರುತ್ತದೆ. ಸರಪಳಿ 1330.00 ಮೀ.ಯಿಂದ 1840.00 ಮೀ ವರೆಗೆ ಅಂದಾಜುಪಟ್ಟಿ ಮೊತ್ತ ರೂ.78.00 ಲಕ್ಷಗಳಿಗೆ ಸಿದ್ಧಪಡಿಸಲಾಗಿದ್ದು, ಈ ಕಾಮಗಾರಿಯನ್ನು ಅತಿ ತುರ್ತಾಗಿ ನಿರ್ವಹಿಸಬೇಕಾಗಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಅಂದಾಜು ಪಟ್ಟಿಯ ಮೊತ್ತ ರೂ.78,00,000/- ಗಳಾಗಿದ್ದು, ಇದನ್ನು ಲೋಕೋಪಯೋಗಿ ಇಲಾಖೆ 07-08 ನೇ ಸಾಲಿನ ದರ ಪಟಿಯಂತೆ ತಯಾರಿಸಲಾಗಿರುತ್ತದೆ. ಸದರಿ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:17/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:17/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಶಿಕ್ಷಣ ಮತ್ತು ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008 ರ ನಡವಳಿಗಳು

ವಿಷಯದ ಸಂಖ್ಯೆ:296/08-09

ಹಿರಿಯ ನಾಗರಿಕರಿಗೆ ಮಧ್ಯಾಹ್ನದ ಬಿಸಿ ಊಟ ವಿತರಣಾ ಕೇಂದ್ರದಲ್ಲಿ ಊಟದ ವಿತರಣೆ ಹಾಗೂ ಇತರೆ ಕೆಲಸ ಕಾರ್ಯಗಳಿಗೆ ಮಾಸಿಕ ಗೌರವ ಧನದ ಆಧಾರದ ಮೇರೆಗೆ ಸಹಾಯಕರನ್ನು ನೇಮಿಸುವ ಬಗ್ಗೆ.

ಪ್ರಸ್ತಾವನೆ:

ಹಿರಿಯ ನಾಗರಿಕರಿಗೆ ಮಧ್ಯಾಹ್ನದ ಬಿಸಿ ಊಟ ವಿತರಣಾ ಕೇಂದ್ರದಲ್ಲಿ ಊಟದ ವಿತರಣೆ ಹಾಗೂ ಇತರೆ ಕೆಲಸ ಕಾರ್ಯಗಳಿಗೆ ಮಾಸಿಕ ಗೌರವ ಧನದ ಆಧಾರದ ಮೇರೆಗೆ ಸಹಾಯಕರನ್ನು ನೇಮಿಸಲು 2007-08ನೇ ಸಾಲಿನ ಕಲ್ಯಾಣ ಕಾರ್ಯಕ್ರಮಗಳಲ್ಲಿ "ಹಿರಿಯ ನಾಗರಿಕರಿಗೆ ಬಿಸಿಯೂಟ" ದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈ ಬಗ್ಗೆ ಪ್ರತಿ ವಲಯಗಳಲ್ಲಿ 100 ಹಿರಿಯ ನಾಗರಿಕರನ್ನು ಗುರ್ತಿಸಿ, ಒಟ್ಟು ಅಂದಾಜು 150 ವಾರ್ಡ್‌ಗಳಿಗೆ ಸುಮಾರು 15000 ಫಲಾನುಭವಿಗಳನ್ನು ಸಮೀಕ್ಷೆ ಮುಖಾಂತರ ಗುರ್ತಿಸುವಂತೆ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಸೂಚಿಸಲಾಗಿತ್ತು. ಅದರಂತೆ, ಸಮೀಕ್ಷೆ ನಡೆಸಿ ಪ್ರಸಕ್ತ 08 ವಲಯಗಳ 80 ಕೇಂದ್ರಗಳಲ್ಲಿ ಸುಮಾರು 4815 ಹಿರಿಯ ನಾಗರಿಕರಿಗೆ ಬಿಸಿಯೂಟವನ್ನು "ಅಕ್ಷಯ ಪಾತ್ರೆ ಫೌಂಡೇಶನ್" ಇವರಿಂದ ವಿತರಿಸಲಾಗುತ್ತಿದೆ. ಸದರಿ ಸಂಸ್ಥೆಯವರೊಂದಿಗೆ ಒಡಂಬಡಿಕೆ ಮಾಡಿಕೊಂಡಂತೆ ಪ್ರತಿ ಊಟಕ್ಕೆ ರೂ.6.00 ಗಳಂತೆ ಹಣ ಪಾವತಿಸಲು ಎಲ್ಲಾ ವಲಯಗಳಿಗೆ ತಿಳಿಸಲಾಗಿದೆ.

ಸದರಿ ಯೋಜನೆಯ ಬಗ್ಗೆ ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ಇದ್ದು, ಆದರೆ ಆಹಾರ ವಿತರಣೆಯನ್ನು ಸಮರ್ಪಕವಾಗಿ ವಿತರಿಸಲು ಸಿಬ್ಬಂದಿ ಕೊರತೆಯಿದೆ. ಹಳೆಯ ವಲಯಗಳಲ್ಲಿ ಹೊಲಿಗೆ ತರಬೇತಿ ಶಿಕ್ಷಕಿಯರನ್ನು ಸೇವೆಗೆ ಬಳಸಿಕೊಂಡಿರುವ ಹಿನ್ನಲೆಯಲ್ಲಿ ಹೊಲಿಗೆ ತರಬೇತಿ ಕೇಂದ್ರಗಳು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ಸಾರ್ವಜನಿಕರಿಂದ ಆಕ್ಷೇಪಣೆ ಬರುತ್ತಿದೆ. ಸದರಿ ಯೋಜನೆಯು 2008-09ನೇ ಸಾಲಿನಲ್ಲಿ ಮುಂದುವರೆದಿದ್ದು, ಇನ್ನೂ ಹೆಚ್ಚಿನ ಫಲಾನುಭವಿಗಳನ್ನು ಆಯ್ಕೆ ಮಾಡುವ ಉದ್ದೇಶವಿದೆ. ಈ ಬಗ್ಗೆ ದಿನಾಂಕ:11/06/2008 ರಂದು ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅಧ್ಯಕ್ಷತೆಯಲ್ಲಿ ಕಲ್ಯಾಣ ಕಾರ್ಯಕ್ರಮಗಳ ಪ್ರಗತಿ ವಿಮರ್ಶೆಯಲ್ಲಿ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರವರು ಸಿಬ್ಬಂದಿಯ ಕೊರತೆಯಿದೆಯೆಂದು ಅಭಿಪ್ರಾಯಿಸಿರುತ್ತಾರೆ. ಆದಕಾರಣ, ಊಟದ ವಿತರಣೆಗೆ ಪ್ರತಿ ಕೇಂದ್ರಕ್ಕೆ ಓರ್ವ ಸಹಾಯಕರನ್ನು ಮಾಸಿಕ ಗೌರವಧನದ ಮೇಲೆ ಹೊರ ಗುತ್ತಿಗೆಯಿಂದ ಅಥವಾ ಹಿರಿಯ ನಾಗರಿಕರಲ್ಲಿ ಒಬ್ಬರನ್ನು ಗೌರವಧನದ ಆಧಾರದ ಮೇರೆಗೆ ಸೇವೆಗೆ ಪಡೆಯುವಂತೆ ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸದರಿ ಸಹಾಯಕರಿಗೆ ಮಾಸಿಕ ರೂ.500/- ಗಳು ಮೀರದಂತೆ ಗೌರವಧನವನ್ನು ವಿತರಿಸಲು ಸಂಬಂಧಪಟ್ಟ ಲೆಕ್ಕ ಶೀರ್ಷಿಕೆಯಿಂದ ಭರಿಸಬಹುದಾಗಿದೆಯೆಂದು ಹಾಗೂ ಕೇಂದ್ರಗಳ ಉಸ್ತುವಾರಿಯನ್ನು ಸಂಬಂಧಪಟ್ಟ ವಾರ್ಡಿನ/ವ್ಯಾಪ್ತಿಯ ಇಂಜಿನಿಯರಿಂಗ್ ಅಧಿಕಾರಿಗಳು/ಆರೋಗ್ಯ/ಕಂದಾಯ ಅಧಿಕಾರಿಗಳನ್ನು ನೇಮಿಸುವಂತೆ ಎಲ್ಲಾ ವಲಯ ಅಪರ/ಜಂಟಿ ಆಯುಕ್ತರುಗಳಿಗೆ ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರು ಸೂಚಿಸಿದ್ದು, ಈ ಹಿನ್ನಲೆಯಲ್ಲಿ ಮೇಲ್ಕಂಡ ಪ್ರಸ್ತಾವನೆಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿ.

ತೀರ್ಮಾನ: ಆಯುಕ್ತರವರ ದಿನಾಂಕ:02/07/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು.

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಸಾರ್ವಜನಿಕ ಕಾಮಗಾರಿ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:09/07/2008 ರ ನಡವಳಿಗಳು

ವಿಷಯದ ಸಂಖ್ಯೆ:299/2008-09

Providing Asphalting to BDA main road and Rusthumbagh main road in Murugeshpalya in Ward No.73 ರ ಕಾಮಗಾರಿ ಬಗ್ಗೆ.

ಪ್ರಸ್ತಾವನೆ:

Providing Asphalting to BDA main road and Rusthumbagh main road in Murugeshpalya in Ward No.73 ರ ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-2) ರವರು ಮೊದಲನೇ ಕರೆಯಲ್ಲಿ ಟೆಂಡರ್ ಆಹ್ವಾನಿಸಿರುತ್ತಾರೆ. ಗುತ್ತಿಗೆದಾರರಿಂದ 02 ಟೆಂಡರ್‌ಗಳು ಸ್ವೀಕೃತವಾಗಿದ್ದು, 02 (ಎರಡು) ಟೆಂಡರ್‌ದಾರರ ತಾಂತ್ರಿಕ ಬಿಡ್ ಸಿಂಧುವಾಗಿರುತ್ತದೆ. ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-2) ರವರು ಕನಿಷ್ಠ ಟೆಂಡರ್‌ದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್, ಗುತ್ತಿಗೆದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಮಂಡಿಸಿರುತ್ತಾರೆ.

ರೂ.50.00 ಲಕ್ಷಗಳ ಕಾಮಗಾರಿಯ ಅಂದಾಜು ಪಟ್ಟಿಗೆ 2007-08ನೇ ಸಾಲಿನ ದರಪಟ್ಟಿಯ ಆಧಾರದ ಮೇಲೆ ಜಂಟಿ ಆಯುಕ್ತರು ಮತ್ತು ಮುಖ್ಯ ಅಭಿಯಂತರರು (ಪೂರ್ವ) ರವರು ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಟೆಂಡರ್‌ಗಿಟ್ಟ ಮೊಬಲಗು ರೂ.49,97,604.93 ಗಳಾಗಿದ್ದು, ಮಂಜೂರಾದ ದರಗಳಿಗೆ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು ಶೇಕಡ 80.37% ರಷ್ಟು ಹೆಚ್ಚಿನ ದರಗಳನ್ನು ನಮೂದಿಸಿದ್ದು, ಕನಿಷ್ಠ ಟೆಂಡರ್‌ದಾರರಾಗಿರುತ್ತಾರೆ. ನಮೂದಿಸಿದ ದರಗಳು ಹೆಚ್ಚಿನದಾಗಿದ್ದರಿಂದ ಕಾರ್ಯಪಾಲಕ ಅಭಿಯಂತರರು (ಶಾಂತಿನಗರ-2) ರವರು ಗುತ್ತಿಗೆದಾರರೊಡನೆ ಸಂಧಾನ ನಡೆಸಲಾಗಿ, ಗುತ್ತಿಗೆದಾರರು ಸಂಧಾನದ ನಂತರ ನಮೂದಿಸಿದ ಶೇಕಡ 60.64% ರಷ್ಟು ಹೆಚ್ಚುವರಿ ದರಗಳು ಸಮಪರ್ಕವಾಗಿದ್ದು ಮತ್ತು ಲೋಕೋಪಯೋಗಿ ಇಲಾಖೆಯಿಂದ ಇತ್ತೀಚೆಗೆ ಹೊರಡಿಸಿದ ಸುತ್ತೋಲೆಯಂತೆ 60/70 ಗ್ರೇಡ್ ಬಿಟುಮಿನ್ ವ್ಯತ್ಯಾಸದ ದರವನ್ನು ಪರಿಗಣಿಸಿ ನಮೂದಿಸಿದ ದರಗಳಾದ ಶೇಕಡ 14.76% ರಷ್ಟು ಹೆಚ್ಚುವರಿ ದರಗಳನ್ನು ನೀಡಿದಲ್ಲಿ ಕಾಮಗಾರಿಯನ್ನು ನಿರ್ವಹಿಸಲು ಸಿದ್ದನಿರುತ್ತೇನೆಂದು ಸಂಧಾನ ಪತ್ರ ನೀಡಿರುತ್ತಾರೆ. ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು (ಪೂರ್ವ) ರವರು ಅನುಮೋದನೆಗೆ ಶಿಫಾರಸ್ಸು ಮಾಡಿದ್ದು, ಮಾನ್ಯ ಆಯುಕ್ತರವರು ಒಪ್ಪಿಗೆ ನೀಡಿರುತ್ತಾರೆ.

ಮೇಲಿನ ಅಂಶಗಳನ್ನು ಪರಿಶೀಲಿಸಲಾಗಿ ಟೆಂಡರ್‌ನ ಒಟ್ಟು ಮೊತ್ತ (ಟೆಂಡರ್ ಪ್ರೀಮಿಯಂ ಸೇರಿ) ರೂ.80,28,225.00 ಗಳಾಗಿದ್ದು, ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/110/ಎಹೆಚ್‌ಡಿ/2002, ದಿನಾಂಕ:24/01/2003 ರೀತ್ಯಾ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಕಾಯ್ದೆ, ನಿಯಮಗಳು 1977 ನಿಯಮ 6ಕ್ಕೆ ಆರ್ಥಿಕ ಅಧಿಕಾರಗಳ ತಿದ್ದುಪಡಿಯನ್ನು ಸರ್ಕಾರ ತಂದಿದ್ದು, ಟೆಂಡರ್ ಅಂಗೀಕರಿಸುವ ಅಧಿಕಾರ ಮಾನ್ಯ ಆಯುಕ್ತರು/ಆಡಳಿತಗಾರರು ರವರ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನೆಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ಕೆ.ಎನ್.ಶ್ರೀನಿವಾಸ್ ರವರು 2007-08ನೇ ಸಾಲಿನ ದರಪಟ್ಟಿಯ ಮೇಲೆ ನಮೂದಿಸಿದ ದರಗಳಿಗೆ 60/70 ಗ್ರೇಡ್ ಡಾಂಬರಿನ ವ್ಯತ್ಯಾಸದ ದರಗಳನ್ನು ಪರಿಗಣಿಸಿ ಬಂದಂತಹ ಶೇಕಡ 14.76% ರಷ್ಟು ಹೆಚ್ಚುವರಿ ದರಗಳು ಅಥವಾ ರೂ.80,28,225.00 (ರೂ.ಎಂಭತ್ತು ಲಕ್ಷದ ಇಪ್ಪತ್ತೆಂಟು ಸಾವಿರದ ಎರಡು ನೂರ ಇಪ್ಪತ್ತೈದು ಮಾತ್ರ) ಗಳ ಟೆಂಡರ್ ಅನುಮೋದನೆಯನ್ನು ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:20/06/2008 ರ ಟಿಪ್ಪಣಿ.

**ತೀರ್ಮಾನ:** ಆಯುಕ್ತರವರ ದಿನಾಂಕ:20/06/2008 ರ ಟಿಪ್ಪಣಿಯನ್ನು ಒಪ್ಪಿದೆ.

(ದಿಲೀಪ್ ರಾವ್)
ಆಡಳಿತಗಾರರು